ಮಾತನಾಡಿದರೆ ಹೇಗೆ? ನಿನ್ನೆ ಸಂಬಂಧಪಟ್ಟ ಎಂಎಲ್ಎಗಳು ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಪ್ರಶ್ನೋತ್ತರ ವೇಳೆಯಾದ ಮೇಲೆ ನೋಡೋಣ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ನಿಲುವಳಿ ಸೂಚನೆಯ ಉದ್ದೇಶವೇನು?

ಗೊಂದಲ

ಅಧ್ಯಕ್ಷರು :, ನಿನ್ನೆ ದಿವಸ ಸಂಬಂದಪಟ್ಟ ಎಂಎಲ್ಎಗಳು ಆ ವಿಷಯದ ಬಗ್ಗೆ ಮಾತನಾಡಿದ್ದಾರೆ, ಅದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳಿದರೆಂದರೆ, ನಾನೇ ಇನ್ಸ್ಪೆಕ್ಟ್ ಮಾಡಿ, ಸಂಬಂಧಪಟ್ಟ ಡಿ.ಸಿ. ಹತ್ತಿರ ಮಾತನಾಡಿ ಪೂರ್ಣವಾದ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದಾರೆ, ಮತ್ತೆ ಅದರಲ್ಲಿ ಏನಿದೆ? ಇದು ನೀವು ನಡೆಮಕೊಳ್ಳುವ ವರ್ತನೆ ಸರಿಯಲ್ಲ. ಪ್ರಶ್ನೆಗಳನ್ನು ಕಳುಹಿಸಿರುವವರು ಬಹಳಷ್ಟು ಮಂದಿ ಸದಸ್ಯರಿದ್ದಾರೆ, ಮಾನ್ಯ ಶೆಟ್ಟರ್ರವರು ಈ ರೀತಿ ಮಾತನ್ನಾಡುತ್ತಾರೆಂದರೆ ನಾನು ಇಷ್ಟಪಡುವುದಿಲ್ಲ ನಿನ್ನೆಯೇ ವಿಷಯ ಪ್ರಸ್ತಾಪ ಆಗಿದೆ ಎಂದು ಎಂದು ಹೇಳಿದರೂ ಪುನಃ ಮಾತನಾಡಿದರೆ ಹೇಗೆ?

ಗೊಂದಲ

ನಿನ್ನೆ ಈ ಬಗ್ಗೆ ಪ್ರಸ್ತಾಪ ಆಗಿದೆ, ಅವರು ಕಳುಹಿಸಿರುವ ಸೂಚನೆಯನ್ನು ನಾನು ತಿರಸ್ಕರಿಸಿದ್ದೇನೆ. ತಿರಸ್ಕರಿಸಿ ಅವರಿಗೆ ಎಂಡಾರ್ಸ್ಮೆಂಟ್ ಕೂಡ ಕೊಟ್ಟಿದ್ದೇನೆ. ನಿನ್ನೆಯೇ ನೀವು ಹೇಳಬೇಕಾಗಿತ್ತು. ನಿನ್ನೆ ನೀವು ಏಕೆ ಹೇಳಲಿಲ್ಲ? ನಿನ್ನೆ ನೀವು ಏನು ಮಾಡುತ್ತಿದ್ದೀರಿ? ನಾನು ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುತ್ತೇನೆ.

(ಬಿಜೆಪಿಯ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ಹೂಡಿದರು.)

ಅದಕ್ಕಾಗಿ ಈಗ ನಾನು ಸಭೆಯ ಅಭಿಪ್ರಾಯವನ್ನು ಕೇಳುತಿದ್ದೇನೆ. ಯಾರ್ಯಾರು ಪರವಾಗಿದ್ದೀರಿ ಹೇಳಿ, ಸಭೆಯ ಅಭಿಮತ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಬೇಕೆನ್ನುವುದಾಗಿದೆ.

ಗೊಂದಲ

ಆದ್ದರಿಂದ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುತ್ತೇನೆ ಬಹಳ ಜನ ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಲು ಕಾಯುತ್ತಿದ್ದಾರೆ ಈ ರೀತಿ ವರ್ತಿಸಿದರೆ ಜನ ನಿಮ್ಮನ್ನು ಮೆಚ್ಚುವುದಿಲ್ಲ, ನಾನು ಸಭೆಯ ಅಭಿಪ್ರಾಯದ ಮೆಲೆ ಹೋಗುತ್ತಿದ್ದೇನೆ. The house is supreme I cannot allow it ನಾನು ಸಭೆಯ ಅಭಿಪ್ರಾಯದಂತೆ ಹೋಗಬೇಕು, ನಾನು ಅವರ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ಎಂಡಾರ್ಸ್ಮೆಂಟ್ ಅನ್ನು ಕಳುಹಿಸಿಕೊಟ್ಟಿದ್ದೇನೆ, 185 ಜನರು ಪ್ರಶ್ನೋತ್ತರ ವೇಳೆ ಮೊದಲು ಆಗಲಿ ಎಂದು ಹೇಳುತ್ತಿದ್ದಾರೆ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುತ್ತೇನೆ. ಈಗ ಪ್ರಶ್ನೋತ್ತರಗಳು

3 ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು : ಗೋಪಾಲ ಭಂಡಾರಿಯವರೇ, ಪ್ರಶ್ನೆ ಕೇಳಿ..

ಶ್ರೀ ಗೋಪಾಲ ಭಂಡಾರಿ ಹೆಬ್ : ಮಾನ್ಯ ಅಧ್ಯಕ್ಷರೆ....

ಗೊಂದಲ

ಅಧ್ಯಕ್ಷರು : ಅವರು ಹೇಳಿದ್ದು ಒಂದನ್ನು ಬರೆದುಕೊಳ್ಳಬೇಡಿ. ಅವರು ಉದ್ದೇಶಪೂರ್ವಕವಾಗಿಯೇ ಗಲಾಟೆ ಮಾಡುತ್ತಿದ್ದಾರೆ. ಸಭೆಯ ಅಭಿಪ್ರಾಯ ನನಗೆ ಮುಖ್ಯ.

ಸಭೆಯಲ್ಲಿ 185 ಜನ ಮಾನ್ಯ ಸದಸ್ಯರು ಪ್ರಶ್ನೋತ್ತರಗಳು ಆಗಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ, ಮೊದಲು ಪ್ರಶ್ನೋತ್ತರಗಳನ್ನು ಮುಗಿಸೋಣ..... I can not allow. The House is supreme. ನೀವು 35 ಜನ ಸುಪ್ರೀಂ ಅಲ್ಲ. ಗೋಪಾಲ ಭಂಡಾರಿಯವರೇ, ಉಪ ಪ್ರಶ್ನೆ ಕೇಳಿ.....

ಗೊಂದಲ

This is not the way. ನೀವು ಈ ರೀತಿ ಗಲಾಟೆ ಮಾಡಿದರೆ ಜನರು ಮೆಚ್ಚುವುದಿಲ್ಲ. ಪ್ರಶ್ನೋತ್ತರ ವೇಳೆ ಆದ ಮೇಲೆ ನೋಡೋಣವೆಂದರೂ ಕೇಳದಿದ್ದರೆ ಹೇಗೆ? ನೀವು ನೂರು ಸಾರಿ ಕೇಳಿದರೂ ನಾನು ಅಲೋ ಮಾಡುವುದಿಲ್ಲ. ಪ್ರಶ್ನೋತ್ತರ ವೇಳೆ ಆದ ಮೇಲೆ ಸಹ I will decide on merits. ಸಿ. ಗುರುಸ್ವಾಮಿಯವರೇ ಪ್ರಶ್ನೆ ಕೇಳಿ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ.....

ಗೊಂದಲ

ಅಧ್ಯಕ್ಷರು : ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದು, ನಾನು ಹೇಳುವುದು ಮತ್ತು ಮಾನ್ಯ ಮಂತ್ರಿಗಳು ಹೇಳುವುದನ್ನು ಮಾತ್ರ ಬರೆದುಕೊಳ್ಳಿ. ಅವರು ಹೇಳಿದ್ದು ಯಾವುದನ್ನೂ ಬರೆದುಕೊಳ್ಳಬೇಡಿ.

ಗೊಂದಲ

Mr. Speaker : The House is supreme. I cannot allow. I abide the decision taken by the House. ನೀವು ಯಾವುದನ್ನೂ ಒಪ್ಪುತ್ತೀರಿ ಹೇಳಿ. ನನಗೆ ನೀವು 35 ಜನ ಸುಪ್ರೀಂ ಅಲ್ಲ. 185 ಜನ ಸುಪ್ರೀಂ. This is my decision. ನೀವು ಐನೂರು ಸಲ ಕೇಳಿದರೂ ನಾನು ಅಲೋ ಮಾಡುವುದಿಲ್ಲ. ಜನರು ಪತ್ರಿಕೆಗಳಲ್ಲಿ ದೂರದರ್ಶನದಲ್ಲಿ ಎಲ್ಲಾ ನೋಡುತ್ತಿದ್ದಾರೆ. ನಾನು ಸಭೆಯ ತೀರ್ಮಾನದ ಮೇಲೆ ಹೋಗುತ್ತೇನೆಯೇ ಹೊರತು, ನಾನು ನಿನಗೆ ಅಲೋ ಮಾಡುವುದಿಲ್ಲ.

ಗೊಂದಲ

ಶ್ರೀ ವಿ. ಸೋಮಣ್ಣನವರೂ ಇಲ್ಲ. ಶ್ರೀ ರಾಜಾ ವೆಂಕಟಪ್ಪನಾಯಕ್ ರವರೂ ಇಲ್ಲ. ಶ್ರೀ ಭರಮಗೌಡ ಕಾಗೆ ಅವರೂ ಇಲ್ಲ. ಶ್ರೀ ಆರ್ ಅಶೋಕ್ ಅವರೂ ಇಲ್ಲ. ಶ್ರೀ ದಿನೇಶ್ ಗುಂಡೂರಾವ್ ಸಹ ಇಲ್ಲ. Regular questions are over.

ಕೃಷಿ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡುವ ಬಗ್ಗೆ

552 (4881) : ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಇಲಾಖೆಯಲ್ಲಿ 443 ದ್ವಿತೀಯ ದರ್ಜೆ ಸಹಾಯಕರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿಯನ್ನು ಇಲಾಖೆಯ ಆದೇಶಗಳನ್ವಯ ಸಕ್ರಮಗೊಳಿಸಿದ ನಂತರವೂ ಸಾಮಾನ್ಯ ಜೇಷ್ಠತಾ ಪಟ್ಟಿಯಲ್ಲಿ ಅವರ ಹೆಸರನ್ನು ಸೇರಿಸದೆ ಹೆಚ್ಚುವರಿ ಜೇಷ್ಠತಾ ಪಟ್ಟಿಯಲ್ಲಿಗುವ ಔಚಿತ್ಯವೇನು;

ಆ) ಮೇಲಿನ 443 ಹುದ್ದೆಗಳಿಗೆ ಮುಂಬಡ್ತಿ ನೀಡಿರುವುದನ್ನು ಪ್ರೀಜ್ ಮಾಡಿ ಸಕ್ರಮಗೊಳಿಸುವ ಪ್ರೀಜಿಂಗ್ ಪ್ರಸ್ತಾವನೆಯು ಸುಮಾರು ವರ್ಷಗಳಿಂದಲೂ ಸರ್ಕಾರದೊಡನೆ ಪತ್ರ ವ್ಯವಹಾರದಲ್ಲಿದ್ದು, ಇತ್ಯರ್ಥಗೊಂಡಿರುವುದಿಲ್ಲ; ಈ ಬಗ್ಗೆ ಗಮನ ನೀಡಿ ಪ್ರಸ್ತಾವನೆಯನ್ನು ಇತ್ಯರ್ಥಗೊಳಿಸುವುದೇ;